ಬೇಂದ್ರೆಯವರನ್ನು ಸಮರ್ಥಿಸುವ ಕೆಲಸವನ್ನೂ ಮಾಡುತ್ತಿಲ್ಲ, ವಿಮರ್ಶಕರ ತಪ್ಪುಗಳನ್ನೂ ಎತ್ತಿ ತೋರಿಸುತ್ತಿಲ್ಲ ಎನ್ನುವುದು ಗಮನಾರ್ಹ. ಈ ಬಗೆಯ ಸಮತೋಲನದ ಎಚ್ಚರ ಇಡೀ ಕೃತಿಯಲ್ಲಿ ಎದ್ದು ಕಾಣುತ್ತದೆ.

ಸಖೀಗೀತ, ಚಿಗರಿಗಂಗಳ ಚೆಲುವಿ (ಸಖೀಗೀತ), ಪುಟ್ಟವಿಧವೆ (ಸಖೀಗೀತ), ದೀಪ (ನಾದಲೀಲೆ), ಮೊದಲಗಿತ್ತಿ (ನಾದಲೀಲೆ), ನೃತ್ಯಯಜ್ಞ (ಸೂರ್ಯಪಾನ), ಕರಡಿ ಕುಣಿತ /ಕುರುಡು ಕಾಂಚಾಣ (ಸೂರ್ಯಪಾನ), ಕಲ್ಪವೃಕ್ಷ ವೃಂದಾವನಂಗಳಲಿ (ಹಾಡು–ಪಾಡು), ಜೋಗಿ (ಗಂಗಾವತರಣ), ಸ್ವರೂಪದೀಪ (ಮುಗಿಲ ಮಲ್ಲಿಗೆ), ದೇಮವ್ವನ ಮೆರವಣಿಗೆ (ನಾಕು ತಂತಿ), ಕರಿಮರಿನಾಯಿ (ಗರಿ) ಕವಿತೆಗಳನ್ನು ಕುರಿತು ಆಡಿದ ಮಾತಾದರೂ ಇತರ ಹಲವಾರು ಕವಿತೆಗಳ ಪ್ರಸ್ತಾಪ ಮತ್ತು ಪರಸ್ಪರ ಸಂಬಂಧದ ಬಗ್ಗೆ ನಿರಂತರವಾಗಿ ಮಾತು ಹರಿಯುವುದರಿಂದ ಇಷ್ಟೇ ಎಂದು ಹೇಳಲಾಗದ ಒಂದು ಬಗೆಯ ನೇಯ್ಗೆ ಇಲ್ಲಿದೆ. ಹಾಗೆಯೇ, ಇಲ್ಲಿ ಬಂದು ಹೋಗುವ ಕನ್ನಡದ ಮತ್ತು ಅದಕ್ಕಿಂತ ಹೆಚ್ಚು ಪಾಶ್ಚಾತ್ಯ ರೆಫರೆನ್ಸುಗಳು ಕಂಗಾಲಾಗಿಸುವಷ್ಟು ವಿಪುಲವಾಗಿದ್ದು ಮಾತಿನ ಓಘ ಯಾವ ಮಟ್ಟದ್ದಾಗಿರಬಹುದು ಎಂಬ ಬಗ್ಗೆ ಅಚ್ಚರಿಯನ್ನು ಹುಟ್ಟಿಸುತ್ತದೆ. ಕೊಂಚ ಅವಸರದ ಮಾತಿನಲ್ಲೇ ಬಂದು ಹೋಗುವ ಅನೇಕ ರೆಫರೆನ್ಸುಗಳ ಯಥಾರ್ಥ ಸಂಬಂಧವನ್ನು ಒಂದಿಷ್ಟು ಬೆಳೆಸುವ, ವಿವರಿಸುವ ಅಗತ್ಯವಿತ್ತು ಎನಿಸಲು ಕೂಡ ಈ ಬಾಹುಳ್ಯವೇ ಕಾರಣವಾಗುತ್ತದೆ.

ಮೊದಲಿಗೆ ದಿವಾಣಜಿ ಇಲ್ಲಿಯೂ ಅಂತಃಸ್ಫುರಣದ ಕುರಿತು ಮಾತನಾಡಿದ್ದಾರೆ. ಪೂರ್ಣಚಂದ್ರ ತೇಜಸ್ವಿಯವರ 'ಚಿದಂಬರ ರಹಸ್ಯ' ಕಾದಂಬರಿಯಲ್ಲಿ ಒಂದು ಚರ್ಚೆಯಿದೆ. ಕೆಸರೂರಿನ ವಿಶ್ವಭವನ ಕಾಫಿ ಕ್ಲಬ್ಬಿನಲ್ಲಿ ದಿನವೂ ಸಂಜೆ ಸೇರುವ ಸಿದ್ದಪ್ಪ, ಹೆಗಡೆ, ಜಯರಾಮ, ಅಂಗಾಡಿ ಮತ್ತು ರಾಮಚಂದ್ರ ಸೇರಿ ನಡೆಸುವ ಚರ್ಚೆ ಮೂರು ಮುಖ್ಯ ಸಂಗತಿಗಳ ಕುರಿತು ಸಾಗುತ್ತದೆ. ಸೃಜನಶೀಲ ಸಾಹಿತಿ ವರ್ತಮಾನದ ಸತ್ಯ ಸಂಗತಿಗಳನ್ನಿಟ್ಟುಕೊಂಡು, ತನ್ನ ಕಲ್ಪನೆಯ ಮೂಲಕ ಭೂತ ಅಥವಾ ಭವಿಷ್ಯಕ್ಕೆ ಸಂಬಂಧಿಸಿದ್ದನ್ನು ಯಥಾವತ್ ಕಟ್ಟಬಲ್ಲನೇ ಎನ್ನುವುದು ಅದರಲ್ಲಿ ಒಂದು. ಮನುಷ್ಯ ತನ್ನ ವರ್ತನೆಗಳಲ್ಲಿ ಸ್ವತಂತ್ರನೆ, ಬಂದಿಯೆ ಎನ್ನುವುದು ಇನ್ನೊಂದು. ಸೃಜನಶೀಲ ಸಾಹಿತ್ಯ ಎಷ್ಟರ ಮಟ್ಟಿಗೆ ಸಾಹಿತಿಯಿಂದ ಸ್ವತಂತ್ರ ಎನ್ನುವುದು ಮತ್ತೊಂದು. ಇಲ್ಲಿಯೂ ಬುದ್ಧಿಗ್ರಾಹ್ಯವಾದ ತಿಳಿವು ಮತ್ತು ಅಂತರಂಗದ ದ್ರವ್ಯವಾದ ಅನುಭವ ಈ ಎರಡರ ಪಾಕ ಕಾವ್ಯವಾಗುವ ಬಗೆಯ ಕುರಿತೇ ಸುದೀರ್ಘವಾದ ಚರ್ಚೆಯಿದೆ. ಬೇಂದ್ರೆಯವರು ಅಂತಃಸ್ಫುರಣದಿಂದಲೇ ಕಟ್ಟಿಕೊಟ್ಟ, ಪ್ರಜ್ಞಾಪೂರ್ವಕ ಪ್ರಯತ್ನವಿಲ್ಲದ ಸಾಲುಗಳನ್ನು ಅವರ ಕವಿತೆಗಳಿಂದ ಎತ್ತಿಕೊಂಡು ದಿವಾಣಜಿ ನಡೆಸುವ ಚರ್ಚೆ ಅಧ್ಯಾತ್ಮ, ಅನುಭಾವ, ರಾಜಕೀಯ, ಸಾಹಿತ್ಯ, ಸಮಕಾಲೀನತೆ ಎಂದೆಲ್ಲ ಹರಿಯುತ್ತದೆ. ಈ ಕಾರಣಕ್ಕಾಗಿಯೂ ಈ ಅಂತಃಸ್ಫುರಣದ ಮಾತು ಬಹಳ ಮಹತ್ವದ್ದಾಗಿದೆ.

ಒಬ್ಬ ಸೂಕ್ಷ್ಮಸಂವೇದಿ ಕವಿಯಲ್ಲಿ ಪರಂಪರೆಯಾಗಲಿ, ಅಧ್ಯಾತ್ಮವಾಗಲೀ, ತನ್ನ ಸದ್ಯದ ವರ್ತಮಾನವಾಗಲೀ, ಭವಿತವ್ಯವನ್ನು ಕುರಿತ ಅವನದೇ ಅವಧೂತತನವಾಗಲೀ ಬೇರೆ ಬೇರೆಯಾಗಿ ಕೆಲಸ ಮಾಡುತ್ತಿರುವುದಿಲ್ಲ. ಅವನ ಸೃಜನಶೀಲ ಅಭಿವ್ಯಕ್ತಿ ಇದೆಲ್ಲದರ ರಸಪಾಕವಾಗುವ ಚೋದ್ಯ ಅವನ ಪ್ರಜ್ಞೆಯ ವಲಯವನ್ನೂ ಮೀರಿ ಘಟಿಸಬಹುದಾಗಿದೆ. ಹಾಗಾಗಿ, ಕಾವ್ಯವನ್ನು ಅದರ ಶಬ್ದ, ಅರ್ಥ ಮತ್ತು ಇತರ ವಿಮರ್ಶಕ ಇತಿಮಿತಿಗಳ ಚೌಕಟ್ಟಿನೊಳಗೆ ಕಾಣುವುದು ತಪ್ಪಾಗುತ್ತದೆ ಎನ್ನುವ ದಿವಾಣಜಿ ಅವರ ಸೂಚನೆ ಎಲ್ಲ ಕಾವ್ಯಾಭ್ಯಾಸಿಗಳಿಗೆ ಮಾರ್ಗದರ್ಶಕ ಸೂತ್ರದಂತಿದೆ.

ಕಾವ್ಯದ ರಾಜಕೀಯ ಸ್ವರೂಪದ ಕುರಿತು ತುಸು ದೀರ್ಘವಾದ ಜಿಜ್ಞಾಸೆಯೇ ಇಲ್ಲಿ ಸಾಗುವುದು ವಿಶೇಷ ಗಮನಕ್ಕೆ ಅರ್ಹವಾಗಿದೆ. ದಿವಾಣಜಿ ಅವರ ಕಾದಂಬರಿ 'ಬಯಲು ಬಸಿರು' ಓದಿದವರಿಗೆ ಸೋವಿಯತ್ ಪತನ ಮತ್ತು ಅದರ ಹಿಂದು ಮುಂದಿನ ಜಿಜ್ಞಾಸೆಗಳು ಅಪರಿಚಿತವಲ್ಲ. ಕನ್ನಡದಲ್ಲಿ